# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿ

| | | |
|---|---|---|
| ಭಾಗ–೪ಎ<br>Part – IVA | ಬೆಂಗಳೂರು, **ಗುರುವಾರ**, ೧೨, ಡಿಸೆಂಬರ್,೨೦೨೪ (ಮಾರ್ಗಶಿರ,೨೧, ಶಕವರ್ಷ, ೧೯೪೬)<br>BENGALURU,THURSDAY, 12, DECEMBER, 2024 (MARGASHIRA, 21, SHAKAVARSHA, 1946) | ನಂ.೬೦೩<br>No. 603 |


**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಐದನೇ ಅಧಿವೇಶನ**

## ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–44)**

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು (1965ರ ಕರ್ನಾಟಕ ಅಧಿನಿಯಮ 15) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 7ಎ ರ ತಿದ್ದುಪಡಿ.-** ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ರ (1965ರ ಕರ್ನಾಟಕ ಅಧಿನಿಯಮ 15) 7ಎ ಪ್ರಕರಣದ (2)ನೇ ಉಪಪ್ರಕರಣದಲ್ಲಿರುವ "ಇಪ್ಪತ್ತು ರೂಪಾಯಿಗಳು, ನಲವತ್ತು ರೂಪಾಯಿಗಳು ಮತ್ತು ಇಪ್ಪತ್ತು ರೂಪಾಯಿಗಳ" ಎಂಬ ಪದಗಳಿಗೆ ಬದಲಾಗಿ "ಐವತ್ತು ರೂಪಾಯಿಗಳು, ಒಂದು ನೂರು ರೂಪಾಯಿಗಳು ಮತ್ತು ಐವತ್ತು ರೂಪಾಯಿಗಳ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

**3. ತೊಂದರೆಗಳನ್ನು ನಿವಾರಿಸುವ ಅಧಿಕಾರ**.- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಏನಾದರೂ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು

ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಕಂಡುಬರುವ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಏನನ್ನಾದರೂ ಅಗತ್ಯಪಡಿಸಬಹುದಾದ ಸಂದರ್ಭದಂತೆ ಉಪಬಂಧಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕಾರ್ಮಿಕ ಕಲ್ಯಾಣ ನಿಧಿಗೆ ಸಂಬಂಧಪಟ್ಟ ನಿಯೋಜಿತ, ನಿಯೋಜಕ ಮತ್ತು ರಾಜ್ಯ ಸರ್ಕಾರವು ಸಂದಾಯ ಮಾಡಬಹುದಾದ ವಂತಿಗೆಯ ದರವನ್ನು ಹೆಚ್ಚಿಸಲು, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ರೂ. 15,81,66,360/- (ಹದಿನೈದು ಕೋಟಿ ಎಂಭತ್ತೊಂದು ಲಕ್ಷ ಅರವತ್ತಾರು ಸಾವಿರದ ಮೂರು ನೂರ ಅರವತ್ತು ರೂಪಾಯಿಗಳ) ಅಂದಾಜು ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುತ್ತದೆ.

**ಸಂತೋಷ್ ಲಾಡ್**
ಕಾರ್ಮಿಕ ಮಂತ್ರಿಗಳು

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ
## ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 1965ರ
## (1657ರ ಕರ್ನಾಟಕ ಅಧಿನಿಯಮ ಸಂಖ್ಯೆ 15) ಉದ್ಧೃತ ಭಾಗ

xx xx xx

**7ಎ. ವಂತಿಗೆ.-** (1) ಕಾರ್ಯ ಸಂಸ್ಥೆಯಲ್ಲಿರುವ ಪ್ರತಿಯೊಬ್ಬ ನಿಯೋಜಿತನಿಗೆ ಸಂಬಂಧಿಸಿದಂತೆ ಅನುಕ್ರಮವಾಗಿ, ನಿಯೋಜಕ, ನಿಯೋಜಿತ ಮತ್ತು ರಾಜ್ಯ ಸರ್ಕಾರದಿಂದ ಸಂದಾಯವಾಗಬೇಕಾದ ನಿಯೋಜಕನ ವಂತಿಗೆ, ನಿಯೋಜಿತರ ವಂತಿಗೆ ಮತ್ತು ರಾಜ್ಯ ಸರ್ಕಾರದ ವಂತಿಗೆ, ಇವುಗಳನ್ನು ಒಳಗೊಂಡ ವಂತಿಗೆಯನ್ನು ಮಂಡಳಿಗೆ, ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ವಂತಿಗೆಗಳು ಆ ನಿಧಿಯ ಭಾಗವಾಗತಕ್ಕದ್ದು.

(2) ಯಾವುದೇ ವರ್ಷದ ಡಿಸೆಂಬರ್ 31 ರಂದು ಕಾರ್ಯ ಸಂಸ್ಥೆಯ ರಿಜಿಸ್ಟರಿನಲ್ಲಿ ಹೆಸರು ಇರುವ ಪ್ರತಿಯೊಬ್ಬ ನಿಯೋಜಿತನಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ನಿಯೋಜಿತ ಮತ್ತು ರಾಜ್ಯ ಸರ್ಕಾರವು ಆ ವರ್ಷಕ್ಕಾಗಿ ಇಪ್ಪತ್ತು ರೂಪಾಯಿಗಳು, ನಲವತ್ತು ರೂಪಾಯಿಗಳು ಮತ್ತು ಇಪ್ಪತ್ತು ರೂಪಾಯಿಗಳ ಮೊತ್ತವನ್ನು ಅನುಕ್ರಮವಾಗಿ ವಂತಿಗೆಯೆಂದು ಸಂದಾಯ ಮಾಡತಕ್ಕದ್ದು.

xx xx xx

KARNATAKA LEGISLATIVE ASSEMBLY

SIXTEENTH LEGISLATIVE ASSEMBLY

FIFTH SESSION

# THE KARNATAKA LABOUR WELFARE FUND (AMENDMENT) BILL, 2024

## (LA Bill No. 44 of 2024)

A Bill further to amend the Karnataka Labour Welfare Fund Act, 1965.

Whereas it is expedient further to amend the Karnataka Labour Welfare Fund Act, 1965 (Karnataka Act 15 of 1965) for the purposes herein after appearing:

Be it enacted by the Karnataka State Legislature in the Seventy fifth year of the Republic of India as follows:-

**1. Short title and commencement.-** (1) This Act may be called the Karnataka Labour Welfare Fund (Amendment) Act, 2024.

(2) It shall come into force at once.

**2. Amendment of section 7A.-** In the Karnataka Labour Welfare Fund Act, 1965 (Karnataka Act 15 of 1965), in section 7A, in sub-section (2), for the words "twenty rupees, forty rupees and twenty rupees", the words, "fifty rupees, one hundred rupees and fifty rupees" shall respectively be substituted.

**3. Power to remove difficulties.-** (1) If any difficulty arises in giving effect to the provisions of this Act, the Government may, by order published in the Official Gazette, make such provisions, not inconsistent with the provisions of this Act, as may appear to it to be necessary for removing the difficulty:

Provided that, no such order shall be made under this section after the expiry of a period of two years from the date of commencement of this Act.

(2) Every order made under this section shall be laid as soon as may be after it is made, before each house of the State Legislature.

## STATEMENT OF OBJECTS AND REASONS

It is considered necessary further to amend the Karnataka Labour Welfare Fund Act, 1965 (Karnataka Act 15 of 1965) to increase the rate of contribution payable by the concerned employee, employer and the State Government to the Labour Welfare fund.

Hence, the Bill.

## FINANCIAL MEMORANDUM

There will be an additional approximate expenditure of Rs. 15,81,66,360/- (Rupees Fifteen Crore Eighty One Lakhs Sixty six thousand three hundred and sixty) by the proposed legislative measure.

**SANTOSH S LAD**
MINISTER FOR LABOUR

**M.K. VISHALAKSHI**
Secretary
Karnataka Legislative Assembly

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ANNEXURE

## Extract from the Karnataka Labour Welfare Fund Act, 1965

## (Karnataka Act 15 of 1965)

XX XX XX

**7A. Contribution.-** (1) In respect of every employee in an establishment there shall be paid contribution to the Board comprising the employer's contribution, employee's contribution and State Government's contribution, payable respectively by the employer, the employee and the State Government and the contributions so paid shall form part of the Fund.

(2) In respect of every employee whose name stands in the register of an establishment on 31st December of a year sum of twenty rupees, forty rupees and twenty rupees respectively shall be payable as contribution for that year by the concerned employee, the employer and the State Government.

XX XX XX

ಮುದ್ರಕರುಹಾಗೂಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕರಾಜ್ಯಪತ್ರ, ಸರ್ಕಾರಿಕೇಂದ್ರಮುದ್ರಣಾಲಯ, ಬೆಂಗಳೂರು

THAMMAIAH